


ಆಕೆಯ ಆಲ್ಬಂ 'ಬ್ಯಾಡ್ ರೋಮಾನ್ಸ್'. ಆಕೆಯ ಉಡುಪು 'ಬ್ಯಾಡ್ ಟೇಸ್ಟ್'. ಅಮೆರಿಕದ ಪಾಪ್ ಗಾಯಕಿ ಲೇಡಿ ಗಾಗಾ ಎಂಟಿವಿ ಮ್ಯೂಸಿಕ್ ಪ್ರಶಸ್ತಿ ಬಾಚಿಕೊಂಡು ರಾಗ ಹಾಡಿದ್ದು ಹಸಿ ಮಾಂಸದ ಉಡುಗೆಯಲ್ಲಿ. ದಂಗಾಗಿ ಬಾಯಿ ತೆರೆದುಕೊಂಡು ನೋಡಿದ ಪ್ರೇಕ್ಷಕರು ಆಕೆ ಇನ್ನೂ ಸ್ವಲ್ಪ ಹೊತ್ತು ಅಲ್ಲೇ ಇದ್ದಿದ್ದರೆ ಮೂಗು ಮುಚ್ಚಿಕೊಳ್ಳಬೇಕಿತ್ತು.

ಲಾಸ್ ಏಂಜಲೀಸ್‌ನ ವಾರ್ಷಿಕ ಮಸಲ್ಸ್ ಬೀಚ್ ಚಾಂಪಿಯನ್‌ಶಿಪ್ ವಿಶೇಷ ಆಕರ್ಷಣೆಯೇ ದೇಹದಾರ್ಢ್ಯ ಮತ್ತು ಬಿಕಿನಿ. ದಾರ್ಢ್ಯ ಇಲ್ಲದಿದ್ದರೂ ಪರವಾಗಿಲ್ಲ, ದೇಹವಿದ್ದರೆ ಸಾಕಂತೆ ಪಾಲ್ಗೊಳ್ಳಲು. ಬಿಕಿನಿ ಇಲ್ಲದಿದ್ದರೂ ಅಡ್ಡಿ ಇಲ್ಲ, ದೇಹವಿದೆಯಲ್ಲವೇ ಎಂಬ ಪ್ರಶ್ನೆ ಭಾಗವಹಿಸುವ ಆಸಕ್ತರಿಂದ ಇದುವರೆಗೆ ಬಂದಿಲ್ಲ.




ಮ್ಯಾಂಚೆಸ್ಟರ್‌ನಲ್ಲಿ ಮನೆಗೆ ನುಗ್ಗಿದ ಕಳ್ಳರು ಯುವಕನನ್ನು ಕಟ್ಟಿಹಾಕಿದರು. ಆತನ ತಂದೆಯನ್ನು ದೋಚಿದರು. ಇನ್ನೇನು ಕೊಠಡಿಯೊಳಗೆ ನುಗ್ಗಿ ಕಪಾಟನ್ನು ತಡಕಾಡಬೇಕು, ಬಿರುಗಾಳಿಯಂತೆ ಎಂಟ್ರಿ ಕೊಟ್ಟ ಮನೆಯೊಡತಿ ಇಡೀ ಕಳ್ಳರ ತಂಡವನ್ನೇ ಮನೆಯಾಚೆ ಓಡಿಸಿದಳು. ಆಕೆಯ ಕೈಯಲ್ಲಿದ್ದಿದ್ದು ಎ.ಕೆ 47 ಎಂದು ಪೊಲೀಸರು ಲೆಕ್ಕಾಚಾರ ಹಾಕಿಕೊಂಡು ಹೋದರೆ ಆಕೆ ಹಾಜರುಪಡಿಸಿದ್ದು ಪೊರಕೆ!

ಎಂಟಿವಿ ಮ್ಯೂಸಿಕ್ ವಿಡಿಯೊ ಪ್ರಶಸ್ತಿ ಸಮಾರಂಭದ ಹೈಲೈಟ್ ಎಂದು ಪ್ರಚಾರ ಮಾಡಿದ್ದ ಕಾರ್ಯಕ್ರಮ ಶುರುವಾಯಿತು. ನಿರೂಪಕಿ ನಕಲಿ ಹೊಟ್ಟೆ ಕಟ್ಟಿಕೊಂಡರೆ, ಕಾರ್ಯಕ್ರಮ ನೀಡುವವರು ಬಾತ್ ಟಬ್ ಅನ್ನೇ ವೇದಿಕೆ ಮೇಲೆ ಹೊತ್ತು ತಂದರು. ಪ್ರೇಕ್ಷಕರು ಮುಂದಿನ ದೃಶ್ಯಕ್ಕೆ ಉಸಿರು ಬಿಗಿ ಹಿಡಿದು ಕಾದರು. ತಂಡದವರು ಟಬ್ ಒಳಗೆ ಕೂತು ಆಲಾಪ ಮಾಡಿದರೆ, ಈಕೆ ನಕಲಿ ಹೊಟ್ಟೆ ಕುಲುಕಿಸುತ್ತ ಜಿಗಿದಾಡಿದಳು. ನಿರಾಸೆಗೊಂಡ ಪ್ರೇಕ್ಷಕನೊಬ್ಬ ಕೋರ್ಟ್‌ಗೆ ಹೋಗಿದ್ದಾನೆ.





ಬ್ಯಾಂಕಾಕ್‌ನ ಈ ಸೆನೇಟರ್‌ಗಳು ಹೊಡೆದಾಡಲು ಪಾರ್ಲಿಮೆಂಟ್ ಹೊರಗೆ ತಾತ್ಕಾಲಿಕ ಅಖಾಡಾ ಮಾಡಿಕೊಂಡು ಕಾದಾಡುತ್ತಿದ್ದಾರೆ. ಅಲ್ಲಿಯ ಸಾಂಪ್ರದಾಯಿಕ ಕಿಕ್ ಬಾಕ್ಸಿಂಗ್ ಪ್ರಚಾರಕ್ಕೆ ಈ ಬಡಿದಾಟ. ಭಾರತದಲ್ಲಾದರೆ ಪಾರ್ಲಿಮೆಂಟ್ ಒಳಗೇ ಕಾಯಂ ಅಖಾಡವಿದೆ, ಪುಣ್ಯವಂತರು ನಮ್ಮ ಸಂಸದರು.

ಪ್ರಾದೇಶಿಕತೆ, ಭಾಷಾವಾರು ಪ್ರಾಂತ್ಯ ಎಂದು ಬಡಿದಾಡುವವರು ಹುಲು ಮಾನವರು ಮಾತ್ರವಲ್ಲ, ಬಾವಲಿಗಳಿಗೂ ಇಂಥ ಭಾವನೆ ಬಂದುಬಿಟ್ಟಿದೆ. ಬೇರೆ ಬೇರೆ ಪ್ರದೇಶದ ಬಾವಲಿಗಳು ಬೇರೆ ಬೇರೆ ರೀತಿಯಲ್ಲಿ ಕೂಗು ಹಾಕುತ್ತವೆ ಎಂಬುದು ಆಸ್ಟ್ರೇಲಿಯ ವಿಜ್ಞಾನಿಗಳ ಅಂಬೋಣ. ಬಾವಲಿಗಳಿಗೂ ಭಾಷಾ ಆಯೋಗ ಮಾಡುವ ಪ್ರಸಂಗ ಬಂದಿದೆ ಎಂದಾಯಿತು.



ಪ್ರೀತಿ, ಪ್ರೇಮ, ಕಾಮ ಎಲ್ಲವನ್ನೂ ಪ್ರತಿನಿಧಿಸಲು ಗ್ರೀಕ್ ದೇವತೆಗಳಿವೆ. ಸಲಿಂಗಿಗಳಿಗೆ ದೇವತೆ ಬೇಡವಾ? ಗ್ರೀಸ್‌ನ ದ್ವೀಪ ಎರೆಸ್ಪೋಸ್‌ನಲ್ಲಿ 7ನೇ ಶತಮಾನದ ಸಲಿಂಗಿ ಕವಯಿತ್ರಿ ಸ್ಯಾಪ್‌ಹೊ ಸ್ತ್ರೀಸಲಿಂಗಿಗಳ ದೇವತೆಯಂತೆ. ಅಲ್ಲಿ ನಡೆಯುವ ವಾರ್ಷಿಕ ಮಹಿಳೆಯರ ಹಬ್ಬದಲ್ಲಿ ಈ ದೇವತೆಗೇ ಮದ್ಯಾಭಿಷೇಕ ನಡೆಯುವುದು.

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@deccanherald.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65